■ ಹನಿ



## ಆಟ ಮುಗಿಯಿತೆ?

ಜುಲೈನಲ್ಲಿ ಭಾರತ ಕ್ರಿಕೆಟ್ ತಂಡದ ಇಂಗ್ಲೆಂಡ್ ಪ್ರವಾಸ ನಡೆಯಲಿದೆ. ಐದು ಟೆಸ್ಟ್‌ಗಳ ಸರಣಿಯಲ್ಲಿ ಆಟವಾಡಲು 18 ಕ್ರಿಕೆಟಿಗರ ಪಡೆ ಸಿದ್ಧವಾಗಿದೆ. ಆದರೆ ಭಾರತದ ವೇಗದ ಬೌಲಿಂಗ್ ಬಲದ ಮುಂಚೂಣಿಯಲ್ಲಿದ್ದ ಜಹೀರ್ ಖಾನ್ ಈ ಪ್ರವಾಸಕ್ಕೆ ಆಯ್ಕೆಯಾಗಿಲ್ಲ. ಗಾಯಗೊಂಡದ್ದರಿಂದ ಅವರನ್ನು ಕೈಬಿಡಲಾಗಿದೆಯೆ ಅಥವಾ ಅವರನ್ನು ಬೇಡವೆಂದು ತಿರಸ್ಕರಿಸಲಾಗಿದೆಯೆ ಎನ್ನುವುದು ಸ್ಪಷ್ಟವಾಗಿಲ್ಲ. ಕ್ರಿಕೆಟ್ ತಜ್ಞರ ಪ್ರಕಾರ, ಜಹೀರ್ ಟೆಸ್ಟ್ ಕ್ರಿಕೆಟ್‌ನಿಂದ ನಿರ್ಗಮನದ ಹಾದಿಯಲ್ಲಿದ್ದಾರೆ. ಅವರಿನ್ನು ತಂಡಕ್ಕೆ ಮರಳುವುದು ಕಷ್ಟ.

ಟೆಸ್ಟ್ ಎಂದಲ್ಲ, ಇದೀಗ ಮುಗಿದ ಐಪಿಎಲ್ 20:ಟ್ವೆಂಟಿ ಕ್ರಿಕೆಟ್‌ನಲ್ಲೂ ಜಹೀರ್ ಗಾಯಗೊಂಡು ನಿವೃತ್ತರಾದವರೇ. ಮುಂಬೈ ಇಂಡಿಯನ್ಸ್ ಪ್ರಮುಖ ಬೌಲರ್ ಆಗಿದ್ದ ಅವರು ಐಪಿಎಲ್–7 ರಲ್ಲಿ ಮೊದಲ ಹಂತದ ಪಂದ್ಯದಲ್ಲೇ ಗಾಯಗೊಂಡವರು ಮರಳಿ ಆಡಲೇ ಇಲ್ಲ. ವೇಗದ ಬೌಲರ್‌ಗಳಿಗೆ ಯಾವತ್ತೂ ಗಾಯ ಎನ್ನುವುದು ಬಗಲ ಶತ್ರುವೇ. ಆದರೆ ಜಹೀರ್ ಖಾನ್ ಗಾಯಗೊಂಡಷ್ಟು ಸಲ ಬೇರೆ ಯಾವ ಬೌಲರ್‌ಗಳೂ ಗಾಯಗೊಂಡಿಲ್ಲವೇನೋ! ಕಪಿಲ್‌ದೇವ್ ಬಿಟ್ಟರೆ ಭಾರತೀಯ ವೇಗದ ಬೌಲರ್‌ಗಳಲ್ಲಿ ಅತ್ಯಂತ ಹೆಚ್ಚು ದಾಖಲೆಗಳನ್ನು ಬರೆದಿರುವ ಜಹೀರ್, ವಿಕೆಟ್‌ನ ಎರಡೂ ಬದಿಗೆ ಚೆಂಡನ್ನು ಸ್ವಿಂಗ್ ಮಾಡುವುದರಲ್ಲಿ ಎಕ್ಸ್‌ಪರ್ಟ್! ಹಳೆಯ ಚೆಂಡನ್ನೂ ರಿವರ್ಸ್ ಸ್ವಿಂಗ್ ಮಾಡಬಲ್ಲ ಅವರ ಚಾಣಾಕ್ಷತೆ ಭಾರತಕ್ಕೆ ಅನೇಕ ಟೆಸ್ಟ್‌ಗಳನ್ನು ಗೆದ್ದುಕೊಟ್ಟಿದೆ. 2011ರ ವಿಶ್ವಕಪ್ ವಿಜಯೀ ತಂಡದಲ್ಲಿ ಜಹೀರ್ ಪ್ರಮುಖ ಪಾತ್ರ ವಹಿಸಿದ್ದರು.

ಇಂಗ್ಲೆಂಡ್ ಪ್ರವಾಸಕ್ಕೆ ಜಹೀರ್ ಬದಲಿಗೆ ರಾಜಸ್ತಾನದ ಹೊಸ ಪ್ರತಿಭೆ ಪಂಕಜ್ ಸಿಂಗ್ ಆಯ್ಕೆಯಾಗಿದ್ದಾರೆ. ಇಂಗ್ಲೆಂಡಿನಲ್ಲಿ ಪಂಕಜ್ ಮೇಲುಗೈ ಪಡೆದರೆ, ಜಹೀರ್ ನಿವೃತ್ತಿ ಅನಿವಾರ್ಯವಾಗಬಹುದು. 35ರ ಹರೆಯದ ಜಾಕ್, ಭಾರತದ ಕಂಡ ಸ್ಫುರದ್ರೂಪಿ ಮತ್ತು ಸಂಯಮದ ಬೌಲರ್ ಕೂಡಾ ಹೌದು.



## ಬಹುಮುಖಿ ರೋಶನ್

ರಾಕೇಶ್ ರೋಶನ್ ಬಾಲಿವುಡ್‌ನ ಯಶಸ್ವಿ ನಟ, ನಿರ್ದೇಶಕ, ನಿರ್ಮಾಪಕ– ಎಲ್ಲವೂ ಹೌದು. ಹಿಂದಿಯ ಒಂದು ಕಾಲದ 'ಸಂಗೀತ ಸಾಮ್ರಾಟ್' ರೋಶನ್ ಅವರ ಮಗ ರಾಕೇಶ್ ಎನ್ನುವುದು ಹಳಬರಿಗಷ್ಟೇ ಮುಖ್ಯ. ಈಗಿನ ಪೀಳಿಗೆಗೆ ರಾಕೇಶ್ ರೋಶನ್ ಎಂದರೆ ಹೃತಿಕ್ ರೋಶನ್ ಅಪ್ಪ. ಒಂದು ಕುಟುಂಬದಲ್ಲಿ ಮೂರು ತಲೆಮಾರೂ ಹೀಗೆ ಖ್ಯಾತಿಯ ಉತ್ತುಂಗಕ್ಕೆ ಏರುವುದು ಅಪರೂಪ.

ಅಪ್ಪ ಸಂಗೀತ ನಿರ್ದೇಶಕರಾಗಿ ಖ್ಯಾತಿಯ ಉತ್ತುಂಗದಲ್ಲಿದ್ದಾಗ ಮಗ ರಾಕೇಶ್ ಬಾಲಿವುಡ್‌ನಲ್ಲಿ ನಟನಾಗಿ ಮಿಂಚಿದ. 1970ರಿಂದ 90ರವರೆಗೆ ಸುಮಾರು 84 ಸಿನಿಮಾಗಳಲ್ಲಿ ಹೀರೊ ಆಗಿ ನಟಿಸಿದ್ದ ರಾಕೇಶ್, ಆ ಬಳಿಕ ನಿರ್ದೇಶಕರಾಗಿ ಹೊಸ ಅವತಾರ ತಳೆದರು. ಖೂನ್ ಭರೀ ಮಾಂಗ್, ಕರಣ್ ಅರ್ಜುನ್, ಕಹೋ ನ ಪ್ಯಾರ್ ಹೈ, ಕೋಯಿ ಮಿಲ್ ಗಯಾ, ಕ್ರಿಶ್ ಮುಂತಾಗಿ ಈತ ನಿರ್ದೇಶಿಸಿದ ಅಷ್ಟೂ ಚಿತ್ರಗಳು ಸೂಪರ್‌ಹಿಟ್ ಆದವು. ಒಂದು ವಿಶೇಷವೆಂದರೆ ಇವರು ನಿರ್ದೇಶಿಸಿದ ಎಲ್ಲ ಚಿತ್ರಗಳೂ ಕೆ ಅಕ್ಷರದಿಂದ ಆರಂಭವಾಗಿವೆ!

ರಾಕೇಶ್ ರೋಶನ್ ಬಗ್ಗೆ ಕಳೆದ ವಾರ ಅತ್ಯುತ್ತಮ ಪುಸ್ತಕವೊಂದು ಪ್ರಕಟವಾಗಿದೆ. ಅದರ ಲೇಖಕಿ ಅವರ ಹಿರಿಯ ಮಗಳು ಸುನೇನಾ. 'ಕ್ರಿಶ್ –3' ಸಿನಿಮಾಕ್ಕೆ ಅಪ್ಪನ ಜತೆ ಸಹಾಯಕ ನಿರ್ದೇಶಕಿಯಾಗಿದ್ದ ಸುನೇನಾ, ಅಪ್ಪನ ವೃತ್ತಿಪರತೆಯ ಅಪರೂಪದ ಚಿತ್ರಗಳನ್ನು ಈ ಪುಸ್ತಕದಲ್ಲಿ ಕಟ್ಟಿ ಕೊಟ್ಟಿದ್ದಾರೆ. ಶತ್ರುಘ್ನ ಸಿನ್ಹಾ, ಜಿತೇಂದ್ರ, ರಿಷಿ ಕಪೂರ್ ಮುಂತಾದ ಸಮಕಾಲೀನ ನಟರೂ ರಾಕೇಶ್ ಬಗ್ಗೆ ಈ ಪುಸ್ತಕದಲ್ಲಿ ಕಕ್ಕುಲಾತಿಯಿಂದ ಮಾತನಾಡಿದ್ದಾರೆ. 'ಈ ಪುಸ್ತಕದ ಓದಿದ ನಂತರ ನನಗೆ ನನ್ನ ಬಗ್ಗೆ ಹೆಮ್ಮೆ ಅನ್ನಿಸಿತು. ನಾನೇ ಒಂದು ಆತ್ಮಕಥೆ ಬರೆಯಬೇಕೆಂದು ಕೊಂಡಿದ್ದೇನೆ' ಎಂದು ರಾಕೇಶ್ ಹೇಳಿದ್ದಾರೆ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65